**ದಿನಾಂಕಃ 27.01.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ–ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಕೆ.ಆರ್. ವಕೀಲರಿಂದಃ–**

ಸ್ಥಳ ತನಿಖೆ ಸಂದರ್ಭದಲ್ಲಿ ಸ್ಥಳಕ್ಕೆ ಕಂದಾಯ ನಿರೀಕ್ಷಕರು ಮತ್ತು ಕಂದಾಯ ಅಧಿಕಾರಿಗೊಂದಿಗೆ ಹೋಗಿರುತ್ತೇನೆ. ಸ್ಥಳಕ್ಕೆ ಹೋಗುವಾಗ ಕಛೇರಿಯಿಂದ ಕೆ.ಎಂ.ಎಫ್–24 ರಿಜಿಸ್ಟರ್ ತೆಗೆದುಕೊಂಡು ಹೋಗಿರುತ್ತೇವೆ. ಸದರಿ ರಿಜಿಸ್ಟರ್ ನಲ್ಲಿ ಮುನಿಸಿಪಲ್ ಖಾತೆಯು ಯಾರ ಹೆಸರಿನಲ್ಲಿ ರಿಜಿಸ್ಟರ್ ಆಗಿರುತ್ತದೆ ಎಂದು ನಮೂದು ಇರುತ್ತದೆ. ಸದರಿ ರಿಜಿಸ್ಟರ್ ನಲ್ಲಿ ಖಾತೆ ಸಂಖ್ಯೆ ನಿವೇಶನದ ಅಳತೆ ಮತ್ತು ಮಾಲೀಕತ್ವದ ಬಗ್ಗೆ ಮಾಹಿತಿ ಇರುತ್ತದೆ. ನಿಸಿ–10 ನ್ನು ನಾನೇ ತಯಾರಿಸಿರುತ್ತೇನೆ. ಅದನ್ನು ನಮ್ಮ ಕಂದಾಯ ನಿರೀಕ್ಷಕರು ಮತ್ತು ಕಂದಾಯ ಅಧಿಕಾರಿಗಳ ಸಹಾಯದಿಂದ ತಯಾರಿಸಿರುತ್ತೇನೆ. ನಿಸಿ–10 ರಲ್ಲಿ ನಿವೇಶನ ಸಂಖ್ಯೆ:24 ರಿಂದ 28 ನಮೂದಾಗಿರುತ್ತವೆ ಎಂದರೆ ಸರಿ.

ನಗರಸಭೆ ಕಛೇರಿಯಿಂದ ಕಟ್ಟಡ ಕಟ್ಟಲು ಪರವಾನಿಗೆ ಕೊಡಬೇಕಾದರೆ ಸದರಿ ನಿವೇಶನವು ನಮ್ಮ ಕಛೇರಿ ವ್ಯಾಪ್ತಿಯ ಒಳಗಡೆ ಬರಬೇಕು. ಗ್ರಾಮಠಾಣೆಯಲ್ಲಿರಬೇಕು ಅಥವಾ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮೋದನಾ ನಕ್ಷೆ ಹೊಂದಿರಬೇಕು. ಮಾಲೀಕತ್ವದ ಬಗ್ಗೆ ದಾಖಲೆಗಳನ್ನು ಕೊಡಬೇಕು. ಪರವಾನಿಗೆ ನೀಡುವ ಮೊದಲು ಕಛೇರಿಯಿಂದ ಸ್ಥಳ ತನಿಖೆಯಾಗುತ್ತದೆ. ಸ್ಥಳ ತನಿಖೆಯಾದ ಬಳಿಕವೇ ಪರವಾನಿಗೆ ನೀಡಲಾಗುತ್ತದೆ. ನಿವೇಶನಕ್ಕೆ ಕಾಂಪೌಂಡ್ ಗೋಡೆ ಕಟ್ಟಲೂ ಸಹ ಪರವಾನಿಗೆ ತೆಗೆದುಕೊಳ್ಳಬೇಕು. ಕಾಂಪೌಂಡ್ ಗೋಡೆ ಕಟ್ಟಲೂ ಸಹ ಈ ಮೇಲೆ ಹೇಳಿದ ನಿಯಮಗಳನ್ನು ಪಾಲಿಸಬೇಕಾಗುತ್ತದೆ ಎಂದರೆ ಸರಿಯಲ್ಲ.

ದಿನಾಂಕಃ03.08.2015 ರಂದು ಖಾತೆ ಸಂಖ್ಯೆಃ 170/1583/170 ನೇದ್ದಕ್ಕೆ ಕಾಂಪೌಂಡ್ ಗೋಡೆ ಕಟ್ಟಲು ಪರವಾನಿಗೆ ನಮ್ಮ ಕಛೇರಿಯಿಂದ ನೀಡಿರುತ್ತದೆ ಎಂದರೆ ಸರಿ. ಸದರಿ ಪರವಾನಿಗೆ ಪತ್ರದಲ್ಲಿ ಷರತ್ತುಗಳು ಇರುತ್ತವೆ. ಕಾಂಪೌಂಡ್ ಗೋಡೆ ಕಟ್ಟಲು ನಮ್ಮ ಇಲಾಖೆಯಿಂದ ನಕ್ಷೆ ಮಂಜೂರು

ಆಗಿರುತ್ತದೆ ಎಂದರೆ ಸಾಕ್ಷಿಯು ಅದನ್ನು ನಾನು ಕಛೇರಿ ದಾಖಲೆ ಮೂಲಕ ಪರಿಶೀಲಿಸಬೇಕಾಗುತ್ತದೆ ಎಂದು ಹೇಳುತ್ತಾರೆ. ಖಾತಾ ನಕಲು ನಮ್ಮ ಕಛೇರಿಯಿಂದ ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ನಾನು ಕಛೇರಿ ದಾಖಲೆ ಮೂಲಕ ಪರಿಶೀಲಿಸಬೇಕಾಗುತ್ತದೆ ಎಂದು ಹೇಳುತ್ತಾರೆ. ಪರವಾನಿಗೆ ನೀಡುವ ಮೊದಲು ಮೇಲ್ಕಂಡ ನಿಯಮಗಳ ಪಾಲನೆಯಾದ ಬಳಿಕವೇ ಪರವಾನಿಗೆ ನೀಡುತ್ತೇವೆ ಎಂದರೆ ಸರಿ.

ಖಾತೆ ಸಂಖ್ಯೆಃ 170/1583/170 ಇದು ನಮ್ಮ ಕಛೇರಿಯಲ್ಲಿ ದಾಖಲಾಗಿದ್ದು ಸದರಿ ಖಾತೆಯಲ್ಲಿರುವ ಆಸ್ತಿ ಅಸ್ತಿತ್ವದಲ್ಲಿದ್ದು ಅದರ ಬಗ್ಗೆ ದಾಖಲೆಗಳನ್ನು ಕಛೇರಿಯಲ್ಲಿ ನಿರ್ವಹಿಸುತ್ತಿದ್ದೇವೆ ಎಂದರೆ ಸಾಕ್ಷಿಯು ಕಛೇರಿಯಲ್ಲಿ ಅಧಿಕೃತ ಮತ್ತು ಅನಧಿಕೃತ ಆಸ್ತಿ ರಿಜಿಸ್ಟರ್ ಗಳು ಇರುತ್ತವೆ ಅವುಗಳನ್ನೆಲ್ಲಾ ಪರಿಶೀಲಿಸಬೇಕಾಗುತ್ತದೆ ಎಂದು ಹೇಳುತ್ತಾರೆ. ನಿಪಿ–11 ರಲ್ಲಿ 16 ನೇ ಕ್ರಮಸಂಖ್ಯೆಯಲ್ಲಿ ಗಾಡಿ ತಿಪ್ಪಯ್ಯನವರು ಖಾತೆ ಸಂಖ್ಯೆಃ260 ರಲ್ಲಿ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂದು ಸ್ಥಳ ತನಿಖೆ ಮೂಲಕ ತಿಳಿದಿರುತ್ತದೆ ಆದರೆ ಅವರ ಸ್ವಾಧೀನತೆಗೆ ಕಛೇರಿಯಲ್ಲಿ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ ಎಂದು ರಿಜಿಸ್ಟರ್ ಗಳ ಮೂಲಕ ತಿಳಿದಿರುತ್ತದೆ. ತೀರ್ಪುಧಣಿದಾರರು {Decree Holder} ಖಾತೆ ಸಂಖ್ಯೆಃ170/1583/170 ರಲ್ಲಿ ಅಧಿಕೃತವಾಗಿ ಸ್ವಾಧೀನತೆ ಹೊಂದಿದ್ದರೂ ಸಹ ನಾನು ನ್ಯಾಯಾಲಯಕ್ಕೆ ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಛೇರಿಯ ದಾಖಲಾತಿಗಳನ್ನು ಸರಿಯಾಗಿ ಪರಿಶೀಲಿಸದೇ ನಾನು ನ್ಯಾಯಾಲಯಕ್ಕೆ ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.